ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಸಿ1(2)(5) ಸಾ.ಪ.ಬಡ್ತಿ-07/2017-18 ದಿನಾಂಕ.01-06-2020

## ಅಧಿಕೃತ ಜ್ಞಾಪನ

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ವೃಂದದ ಹುದ್ದೆಯಿಂದ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ ತತ್ಸಮಾನ ವೃಂದದ ಹುದ್ದೆಗೆ ಬಡ್ತಿ ನೀಡುವ ಸಂಬಂಧ ಗಣಕೀಕೃತ ಕೌನ್ಸಿಲಿಂಗ್ ನಡೆಸುವ ಬಗ್ಗೆ.

ಉಲ್ಲೇಖ: 1.ಈ ಕಛೇರಿ ಪತ್ರ ದಿನಾಂಕ:26.05.2020

2. ಸರ್ಕಾರದ ಆದೇಶ ಪತ್ರ ಸಂಖ್ಯೆ: ಸಿಆಸುಇ18 ಸೇನೌವ 2014 ದಿನಾಂಕ:06.02.2014

@@@@@

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ವೃಂದದ ಹುದ್ದೆಯಿಂದ ಪ್ರೌಢ ಶಾಲಾ ಮುಖ್ಯ ಶಿಕ್ಷಕರು/ ತತ್ಸಮಾನ ವೃಂದದ ಹುದ್ದೆಗೆ ಬಡ್ತಿ ನೀಡುವ ಸಂಬಂಧ ಗಣಕೀಕೃತ ಕೌನ್ಸಿಲಿಂಗ್ ನಡೆಸುವ ಸಂಬಂಧ ಉಲ್ಲೇಖ(1) ರ ಈ ಕಛೇರಿ ಪತ್ರದಲ್ಲಿ ದಿನಾಂಕ:04.06.2020 ರಿಂದ ದಿನಾಂಕ: 06.06 2020 ರವರೆಗೆ ಕೌನ್ಸಿಲಿಂಗ್ ನಡೆಸಲು ದಿನಾಂಕ ನಿಗಧಿ ಪಡಿಸಿದೆ. ಈ ಸಂಬಂಧ ಬೆಂಗಳೂರು ವಿಭಾಗದ **259 ಅರ್ಹ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರುಗಳ** ಪಟ್ಟಿಯನ್ನು www.schooleducation.kar.nic.in ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಸದರಿ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ನಿಮ್ಮ ವ್ಯಾಪ್ತಿಗೆ ಬರುವ ಅರ್ಹ ಶಿಕ್ಷಕರುಗಳಲ್ಲಿ ಉಲ್ಲೇಖ(2) ರ ಸರ್ಕಾರದ ಆದೇಶದಂತೆ ಅಂಗವಿಕಲ ನೌಕರರಿಗೆ ಆದ್ಯತೆ ನೀಡಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಸಬೇಕಾಗಿರುತ್ತದೆ ಈ ಹಿನ್ನಲೆಯಲ್ಲಿ ತಮ್ಮ ವ್ಯಾಪ್ತಿಯಲ್ಲಿ ಮುಖ್ಯ ಶಿಕ್ಷಕರ ಮುಂಬಡ್ತಿಗೆ ಅರ್ಹ ಶಿಕ್ಷಕರುಗಳಲ್ಲಿ ಶೇ40% ಹಾಗೂ ಶೇ40% ಕ್ಕಿಂತ ಹೆಚ್ಚಿಗೆ ಅಂಗವಿಕಲತೆ ಹೊಂದಿರುವ ನೌಕರರುಗಳ ಹೆಸರುಗಳನ್ನು ದಾಖಲೆಗಳೊಂದಿಗೆ [ಅಂಗವೈಪಲ್ಯತೆ ಹೊಂದಿರುವ ಬಗ್ಗೆ ಜಿಲ್ಲಾ ಆರೋಗ್ಯ ಅಧಿಕಾರಿಗಳ ದೃಢಿಕರಣ, ಹೆಚ್.ಆರ್.ಎಂ.ಎಸ್ ಪ್ರತಿ, ಸೇವಾ ವಹಿಯಲ್ಲಿ ಅಂಗವೈಪಲ್ಯತೆ ಬಗ್ಗೆ ಧೃಡಿಕರಣ ಇರುವ ಬಗ್ಗೆ ಸಂಬಂಧಿಸಿದ ಶಿಕ್ಷಕರುಗಳಿಂದ ದಾಖಲೆಗಳೊಂದಿಗೆ ಪರಿಶೀಲಿಸಿ] ಇಂದು ಸಂಜೆ 5:30ರೊಳಗೆ ನಿಮ್ಮ ಧೃಡಿಕರಣದೊಂದಿಗೆ ಮಾಹಿತಿಯನ್ನು ಸಲ್ಲಿಸಲು ತಿಳಿಸಿದೆ. ಸದರಿ ಮಾಹಿತಿ ಸಲ್ಲಿಸುವ ಸಮಯದಲ್ಲಿ ಯಾವುದೇ ಲೋಪದೋಷಗಳಾದಲ್ಲಿ ನಿಮ್ಮನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

[ಸಿ.ಮಂಜುನಾಥ]

ಜಂಟಿ ನಿರ್ದೇಶಕರು [ಆಡಳಿತ]

ಗೆ,

1. ಬೆಂಗಳೂರು ವಿಭಾಗದ ಎಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸುತ್ತಾ.
2. ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ ಶಾಖೆ ಆಯುಕ್ತರ ಕಛೇರಿ ರವರಿಗೆ ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು

c:\users\work\desktop\01.06.2020.docx